**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 8 ಫ್ರಾ.ಸಾ. : 8**

ಸಾಕ್ಷಿಯ ಹೆಸರು : ಸೋಮನಾಥ

ತಂದೆಯ ಹೆಸರು : ರಾಮಾ ನಾಯ್ಕ

ವಯಸ್ಸು : 60 ವರ್ಷ

ಉದ್ಯೋಗ : ನಿವೃತ್ತ ಆರಕ್ಷಕ ಉಪ ನಿರೀಕ್ಷಕರು

ವಾಸ : ಕಾರವಾರ

**ದಿನಾಂಕಃ 07-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ . ದಿನಾಂಕ 01.10.2013 ರಂದು ಮೇಲಾಧಿಕಾರಿಯವರ ಆದೇಶದಂತೆ ಮೊಕದ್ದಮೆ ಸಂ. 5/2013 ಕಲಂ 7, 13(ಬಿ) ಮತ್ತು 13(2) ಪಿ ಸಿ ಆಕ್ಟ್ 1988 ರಲ್ಲಿ ಜಪ್ತಾದ ವಸ್ತು ಸಂ. 1 ರಿಂದ 9 ನೇಯವುಗಳನ್ನು ರಾಸಾಯನಿಕ ಪರೀಕ್ಷಾ ಕೇಂದ್ರ ಧಾರವಾಡಕ್ಕೆ ನೀಡಲು ನನಗೆ ನೇಮಿಸಿದಂತೆ ನಾನು ಧಾರವಾಡ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ನೀಡಿ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಆರಕ್ಷಕ ಉಪಾಧೀಕ್ಷಕರು , ಲೋಕಾಯುಕ್ತ ಕಾರವಾರರವರ ಮುಂದೆ ಅದೇ ದಿನ ವರದಿ ಮಾಡಿಕೊಂಡೆ .

2. ನಾನು 2012 ರಿಂದ 2016 ರವರೆಗೆ ಕಾರವಾರ ಕರ್ನಾಟಕ ಲೋಕಾಯುಕ್ತ ಠಾಣೆಯಲ್ಲಿ ಆರಕ್ಷಕ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 16.09.2013 ರಂದು ಠಾಣೆಯಲ್ಲಿದ್ದಾಗ ರಾಮಾ ಬೀರಪ್ಪ ನಾಯ್ಕ ಕುಮಟಾ ಬಾಡ ಎನ್ನುವವರು ಕಾರವಾರದ ಲೋಕಾಯುಕ್ತ ಕಚೇರಿಗೆ ಬಂದು ಆರಕ್ಷಕ ಉಪಾಧೀಕ್ಷಕರಾದ ಚಾಸಾ-17 ರವರ ಮುಂದೆ ಒಂದು ಲಿಖಿತ ಫಿರ್ಯಾದನ್ನು ನೀಡಿದರು. ಅದನ್ನು ಆರಕ್ಷಕ ಉಪಾಧೀಕ್ಷಕರು ಓದಿದರು . ಆಗ ಗುನ್ನಾ ಸಂ. 5/2013 ರಂತೆ ಕಲಂ 7, 13(ಬಿ) ಮತ್ತು 13(2) ಪಿ ಸಿ ಆಕ್ಟ್ 1988 ಪ್ರಕಾರ ಮೊಕದ್ದಮೆ ದಾಖಲು ಮಾಡಿದರು. ಇಬ್ಬರು ಪಂಚರನ್ನು

ಕರೆಯಿಸಿದರು. ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆಸಿದರು. ಆಗ ಫಿರ್ಯಾದುದಾರ ಹಣ ತಂದಿದ್ದ. ಗಣೇಶ ನಾಯ್ಕ ಎಂಬ ಆರೋಪಿ ಫಿರ್ಯಾದುದಾರನಿಂದ ಹಾಲಿನ ಪುಡಿ ವಿತರಣೆ ಬಗ್ಗೆ ಲಂಚ ಕೇಳಿದ ಬಗ್ಗೆ ಅದನ್ನು ಟ್ರ್ಯಾಪ್ ಸಮಯದಲ್ಲಿ ಕೊಡುವುದಕ್ಕಾಗಿ ತಂದಿದ್ದ. ಅದು ರೂ. 3,000/- ಇತ್ತು . ಮೊಕದ್ದಮೆ ದಾಖಲು ಮಾಡಿದ ಮೇಲೆ ಫಿರ್ಯಾದನ್ನು ಒಂದು ಲಕೋಟೆಯಲ್ಲಿ ಉಪಾಧೀಕ್ಷಕರು ಹಾಕಿ ಅದನ್ನು ಮುಚ್ಚಿ ನ್ಯಾಯಾಲಯಕ್ಕೆ ಸಲ್ಲಿಸಲು ನ್ಯಾಯಾಲಯದ ಕೆಲಸ ಮಾಡುವ ಆರಕ್ಷಕ ಪೇದೆ ರಾಮದಾಸ ಆಚಾರಿ ಮೂಲಕ ಕಳುಹಿಸಿದರು. ನಂತರ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿದರು.

(ಈ ಹಂತದಲ್ಲಿ ಸಾಕ್ಷಿಯು ತನಗೆ ಆರೋಗ್ಯ ಸರಿ ಇಲ್ಲ ಎಂದು ಸಮಯ ಕೋರಿದ್ದಾನೆ . ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ